

ಜಗತ್ತಿನಲ್ಲಿ ಗಟ್ಟಿಯಾಗಿ ನಿಲ್ಲಲು ಅಣಿಗೊಳಿಸಿದವು.

ಕರ್ನಾಟಕ ವೃತ್ತಿ ರಂಗಭೂಮಿಯಲ್ಲಿ ಕಂದಗಲ್ ಹನುಮಂತರಾಯರಿಗೆ ಪ್ರತ್ಯೇಕ ಸ್ಥಾನವಿತ್ತು. ತಮ್ಮ ಕಂಪೆನಿ ನಾಟಕಗಳಿಗೆ ತಾವೇ ಸಾಹಿತ್ಯ ಸಂಭಾಷಣೆಗೆ ಸಿದ್ಧ ಮಾಡುತ್ತಿದ್ದ ಕಂದಗಲ್ಲರು ಅಚ್ಚುಕಟ್ಟಾಗಿ ನಾಟಕಗಳನ್ನು ನಿರೂಪಿಸುತ್ತಿದ್ದರು. ಹೀಗಾಗಿ ಆ ನಾಟಕ ಕಂಪೆನಿಯ 'ಕುರುಕ್ಷೇತ್ರ', 'ಬಡತನದ ಭೂತ', 'ಬೆಳ್ಳಿ ಚುಕ್ಕಿ', 'ಮಾತುಂಗ ಕನ್ಯೆ', 'ಚಿತ್ರಾಂಗದ'– ಈ ಎಲ್ಲಾ ನಾಟಕಗಳು, ಭರ್ಜರಿ ಯಶಸ್ಸು ಕಾಣುತ್ತಿದ್ದವು. ಅರಸರು ಎಲ್ಲಾ ನಾಟಕಗಳಲ್ಲೂ ಪ್ರಮುಖ ಪಾತ್ರಧಾರಿಯಾಗಿ ಗಮನ ಸೆಳೆದರು. ಚಿತ್ರಾಂಗದ ನಾಟಕದ ಅರ್ಜುನನ ಪಾತ್ರವಂತೂ ಅರಸರಿಗೆ ದೊಡ್ಡ ಹೆಸರು ತಂದುಕೊಟ್ಟಿತು.

ಪ್ರತಿಭಾವಂತ ನಟರು ಆಗ ಒಂದೇ ನಾಟಕ ಸಂಸ್ಥೆಗೆ ಅಂಟಿಕೊಳ್ಳುತ್ತಿದ್ದದ್ದು ಬಹಳ ಅಪರೂಪ. ಇದಕ್ಕೆ ಅವರೂ ಹೊರತಾಗಿರಲಿಲ್ಲ. ಅವರು ಕಲಾವೈಭವ ನಾಟ್ಯ ಸಂಘ, ಹಲಗೇರಿ ಜಟ್ಟಪ್ಪನವರ ನಾಟಕ ಮಂಡಲಿ, ಗೋಕಾಕ್‌ನ ಶಾರದಾ ಸಂಗೀತ ನಾಟಕ ಮಂಡಲಿ ಹೀಗೆ ನಾಲ್ಕಾರು ಕಂಪೆನಿಗಳಲ್ಲಿ ಸೇವೆ ಸಲ್ಲಿಸಿದರು. ಧೀರೋದಾತ್ತ ಪಾತ್ರಗಳಿಗೆ ಮಾತ್ರ ಅರಸ್ ಸೀಮಿತರಾಗಿರಲಿಲ್ಲ. ಸ್ತ್ರೀ ಪಾತ್ರಗಳಿಗೂ ಜೀವತುಂಬುವಲ್ಲಿ ಅವರು ನಿಪುಣರಾಗಿದ್ದರು.

'ಚಂದ್ರಹಾಸ'ದಲ್ಲಿ ದುಷ್ಟಬುದ್ಧಿ, 'ಹರಿಶ್ಚಂದ್ರ'ದಲ್ಲಿ ವಿಶ್ವಾಮಿತ್ರ, 'ರಾಜಾವಿಕ್ರಮ'ದಲ್ಲಿ ದುರ್ಜಯ, 'ಬಿಡುಗಡೆ' ನಾಟಕದಲ್ಲಿ ರಾಜೀವ, 'ರಾಮಾಯಣ'ದಲ್ಲಿ ರಾವಣ, 'ಅತ್ತೆ ಸೊಸೆ' ನಾಟಕದಲ್ಲಿ ಮಾರ್ವಾಡಿ ಪಾತ್ರಗಳಲ್ಲಿ ಅರಸ್ ಅದ್ಭುತವಾಗಿ ನಟಿಸಿದರು.

ಒಳ್ಳೆಯ ನಾಟಕ ಕಂಪೆನಿ ಎನ್ನಿಸಿಕೊಂಡರೂ ಜನಮನ್ನಣೆ ಪಡೆದರೂ ಆ ಕಂಪೆನಿಗಳು ಬಹಳ ದಿನ ನಡೆಯುತ್ತಿರಲಿಲ್ಲ. ಅದಕ್ಕೆ ಕಾರಣಗಳು ಹಲವಾರು. 'ಕನ್ನಡ ಥಿಯೇಟರ್ಸ್' ಸಂಸ್ಥೆಯೂ ಇಂತಹ ಸಂಕಷ್ಟಕ್ಕೆ ಸಿಕ್ಕಿಬಿದ್ದಿದ್ದ ಸಮಯದಲ್ಲಿ ಇಬ್ಬರು ಪ್ರಸಿದ್ಧ ನಟರು ಈ ಕಂಪೆನಿಗೆ ಕಾಲಿಟ್ಟರು. ಶುರುವಿನಲ್ಲಿ ಯಶಸ್ಸಿನ ಉತ್ತುಂಗಕ್ಕೇರಿದ್ದ 'ಕನ್ನಡ ಥಿಯೇಟರ್ಸ್ (ಮಾಲೀಕರು–ಎಂ. ಸಿ. ಮಹದೇವಸ್ವಾಮಿ) ಮುಚ್ಚುವ ಹಂತಕ್ಕೆ ತಲುಪಿತ್ತು. ಎಚ್.ಟಿ. ಅರಸ್. ಓಬಳೇಶ್ವರ್ ಇಬ್ಬರೂ ಕಾಲಿಟ್ಟ ಹಾಸನ ಮೊಕ್ಕಾಂನಿಂದ ನಾಟಕ ಕಂಪೆನಿ ಮತ್ತೆ ಸರಿಯಾದ ಹಳಿಗೆ ಬಂತು. ಹಣವನ್ನು ಕಂಪೆನಿಗೆ ತಂದುಕೊಟ್ಟಿತು.

ಆಗ 'ಕನ್ನಡ ಥಿಯೇಟರ್' ಸಂಸ್ಥೆಗೆ ಲಕ್ಷ್ಮಿ ಒಲಿದಿದ್ದು ರಾಜವಿಕ್ರಮ ನಾಟಕದಿಂದ. ಅದರಲ್ಲಿ ಪ್ರಭಾವಿ ಪಾತ್ರ ನಿರ್ವಹಣೆ ಮಾಡಿದವರು ಅರಸ್. ಇಲ್ಲಿ ಅವರಿಗೆ ದುರ್ಜಯನ ಪಾತ್ರ. ಖಳನಾಯಕನಾಗಿ ಅರಸ್ ಅಭಿನಯ ಲೋಕದಲ್ಲಿ ಅಲ್ಲೋಲ ಕಲ್ಲೋಲವನ್ನೇ ಮಾಡಿದರೆನ್ನಬೇಕು. ನಾಡಿನುದ್ದಕ್ಕೂ ಅರಸ್ ಪ್ರತಿನಾಯಕನಾಗಿ ವಿಜೃಂಭಿಸಿದರು. ದೇಹ ಭಾಷೆಯನ್ನು ಸಮರ್ಥವಾಗಿ ಬಳಸಿಕೊಂಡ ಅವರು ಕ್ರೂರ ಪಾತ್ರಗಳ ಅಭಿನಯದಿಂದ ನಾಟಕ ಮಂದಿರದಲ್ಲಿದ್ದವರನ್ನು ಭಯ ಭೀತಿಗೆ ತಳ್ಳುವ ಸಾಮರ್ಥ್ಯ ಪಡೆದರು.

ದುರ್ಜಯನಾಗಿ ಅತ್ಯಂತ ಎತ್ತರದ ಅಭಿನಯವಿತ್ತಿದ್ದ ಅರಸರು 'ಚಂದ್ರಹಾಸ' ನಾಟಕದಲ್ಲಿ ದುಷ್ಟಬುದ್ಧಿಯಾಗಿ ಇನ್ನೂ ಎತ್ತರಕ್ಕೇರಿದರು. ನಾಟಕದ ಉಳಿದ ಪಾತ್ರಗಳನ್ನು ಗೌಣವಾಗಿಸುವಂತಹ ಅಭಿನಯವನ್ನು ಪ್ರದರ್ಶಿಸಿದ ಎಚ್.ಟಿ. ಅರಸ್, ನೋಡುಗರನ್ನು ರೋಮಾಂಚನಗೊಳಿಸುವಲ್ಲಿ ಯಶಸ್ವಿಯಾದ ನಟ.